# ಇಬ್ಬರು ಸ್ನೇಹಿತರು




ಬಹಳ ದಿನಗಳ ಹಿಂದೆ ಆಫ್ರಿಕನ್ ಬುಡಕಟ್ಟಿಗೆ ಸೇರಿದ ಇಬ್ಬರು ಸ್ನೇಹಿತರಿದ್ದರು. ಅವರ ಹೆಸರು ನಡೋಮಿ ಮತ್ತು ಜಂಘೊ ಎಂದಿತ್ತು. ನಡೋಮಿಯ ತಂದೆ ಶ್ರೀಮಂತರಾದರೆ, ಜಂಘೊ ಸಾಮಾನ್ಯ ಕೃಷಿಕನ ಮಗನಾಗಿದ್ದ. ಇಬ್ಬರು ಯುವ ಸ್ನೇಹಿತರು ಬೇಟೆಯಾಡುವುದರಲ್ಲಿ, ಹುಲ್ಲು ಕತ್ತರಿಸುವುದರಲ್ಲಿ ಹಾಗೂ ಬೇರೆಯವರ ಕೆಲಸದಲ್ಲಿ ನೆರವಾಗುವುದರಲ್ಲಿ ಕಾಲ ಕಳೆಯುತ್ತಿದ್ದರು. ಆದರೂ ನಡೋಮಿಗೆ ಹೊರ ಜಗತ್ತನ್ನು ಕಾಣುವ ಆಸೆ ಕಾಡುತ್ತಿತ್ತು.

ಒಂದು ದಿನ ಗೆಳೆಯನನ್ನು ಕರೆದುಕೊಂಡು ಹೊರಟೇಬಿಟ್ಟ. ಹಾಗೇ ಹೋಗುತ್ತಿರುವಾಗ ಒಂದು ಹಳ್ಳಿಯಲ್ಲಿ ಮಲಾಮ ಎಂಬ ಚೆಲುವಾದ ಹುಡುಗಿಯ ಭೆಟ್ಟಿಯಾಯಿತು. ತಾನು ಮದುವೆಯಾದರೆ ಅವಳನ್ನೇ ಎಂದು ನಡೋಮಿ ನಿರ್ಧರಿಸಿದ. ಅವಳಿಗಾಗಿ ತಾನು ಏನನ್ನು ಮಾಡಲೂ ಸಿದ್ಧನಿರುವುದಾಗಿ ಹೇಳಿ ತನ್ನನ್ನು ಮದುವೆಯಾಗುವಂತೆ ಕೇಳಿಕೊಂಡ. ಅದಕ್ಕೆ ಮಲಾಮ, 'ನಾನು ಈ ಊರಿನ ಮುಖ್ಯಸ್ಥನ ಮಗಳು. ನನ್ನ ಅಪ್ಪ ನನ್ನನ್ನು ಬಹಳ ಪ್ರೀತಿಸುತ್ತಾನೆ. ನನ್ನನ್ನು ಮದುವೆಯಾಗಲು ಬಂದ ಯುವಕರಿಗೆ ಒಂದು ಪರೀಕ್ಷೆ ಇಡುತ್ತಾನೆ. ಅದರಲ್ಲಿ ಗೆದ್ದರಷ್ಟೆ ಮಗಳನ್ನು ಮದುವೆ ಮಾಡಿಕೊಡುವುದಾಗಿ ಹೇಳುತ್ತಾನೆ. ಆದರೆ ಅದು ಕಷ್ಟಕರವಾದ ಸವಾಲಾಗಿರುವುದರಿಂದ ನನಗೆ ಈ ಜನ್ಮದಲ್ಲಿ ಮದುವೆಯೇ ಇಲ್ಲ' ಎಂದು ಬೇಜಾರಿನಿಂದ ಹೇಳಿ ತನ್ನ ಸಾಕು ಇಲಿಯನ್ನೆತ್ತಿಕೊಂಡು ಹೊರಟುಹೋದಳು.

ಆಗ ನಡೋಮಿ ಹಿಂಜರಿಯದೆ ಹಳ್ಳಿಯ ಮುಖ್ಯಸ್ಥನ ಬಳಿಗೆ ಹೋಗಿ ತನಗೆ ಮಲಾಮಳನ್ನು ಮದುವೆ ಮಾಡಿಕೊಡುವಂತೆ ಕೇಳಿಕೊಂಡ. ಆಗ ಆ ಮುಖ್ಯಸ್ಥ, 'ಹಾಗಾದರೆ ನೀನು ಒಂದು ಪರೀಕ್ಷೆಯಲ್ಲಿ ಗೆಲ್ಲಬೇಕು. ಅದೇನೆಂದರೆ ಒಂದು ಗುಡಿಸಿಲಿನಲ್ಲಿ 6 ದಿನಗಳನ್ನು ಆಹಾರ, ನೀರಿಲ್ಲದೆ ಕಳೆಯಬೇಕು. ಹೊರಗೆ ಒಬ್ಬ ಅಜ್ಜಿ ಕಾವಲಿರುತ್ತಾಳೆ. ನೀನೇನಾದರೂ ಅವಧಿಗೆ ಮುನ್ನವೇ ನೀರು ಅಥವಾ ಆಹಾರ ಬೇಕೆಂದು ಕೇಳಿದರೆ ನಿನ್ನನ್ನು ಅಲ್ಲಿಯೇ ಕೊಂದುಬಿಡುತ್ತಾರೆ. ಸವಾಲು ಸ್ವಿಕೃತವೋ?' ಎಂದು ಕೇಳಿದ. ತಕ್ಷಣ ಒಪ್ಪಿಕೊಂಡ ನಡೋಮಿ. ನಡೋಮಿಯನ್ನು ಒಂದು ಮಣ್ಣಿನ ಗುಡಿಸಿಲಿಗೆ ಹಾಕಿ ಒಬ್ಬ ಅಜ್ಜಿಯನ್ನು ಕಾಯಲು ಇಟ್ಟರು. ಅರ್ಧ ರಾತ್ರಿಯಾಯಿತು. ಎಲ್ಲಾ ಜನರು ಮಲಗಿದ ಮೇಲೆ, ಮೊದಲೇ ಮಾತನಾಡಿಕೊಂಡಿದ್ದಂತೆ. ಜಂಘೊ ಒಂದು ಮಣ್ಣಿನ ಗೋಡೆಯನ್ನು ಸ್ವಲ್ಪ ಹಸಿಮಾಡಿ, ಒಂದು ಪುಟ್ಟ ಚಾಕುವಿನಿಂದ ತೂತು ಕೊರೆದು ಅದರಲ್ಲಿ ಸಣ್ಣ ನಳಿಕೆಯನ್ನು ತೂರಿಸಿ ಇನ್ನೊಂದು ತುದಿಯನ್ನು ಜೀವರಕ್ಷಕ ದ್ರವದಲ್ಲಿ ಇಟ್ಟನು. ನಡೋಮಿ ಸ್ವಲ್ಪವೂ ಸದ್ದಾಗದಂತೆ ನಳಿಕೆಯಿಂದ ದ್ರವವನ್ನು ಸೇವಿಸಿ ಮಲಗಿದ. ದ್ರವ ಖಾಲಿಯಾಗುತ್ತಿದ್ದಂತೆ ಜಂಘೊ ನಳಿಕೆಯನ್ನು ತೆಗೆದು ಮಣ್ಣನ್ನು ಮೊದಲಿನಂತೆ ಮುಚ್ಚಿ ಜಾಗ ಖಾಲಿ ಮಾಡಿದನು. ಪ್ರತಿ ದಿನ ರಾತ್ರಿ ಇದೇ ಮುಂದುವರಿಯಿತು. ಅಜ್ಜಿಗೆ ಸಂಶಯ ಬಂದಿತು. ಇಷ್ಟು ದಿನ ಇದ್ದವರೆಲ್ಲಾ 2–3 ದಿನಕ್ಕೇ ನೀರು, ಊಟ ಎಂದೆಲ್ಲಾ ಕಿರುಚಾಡಿಬಿಡುತ್ತಿದ್ದರು. ಇವನಿಗೆ ಇದು ಹೇಗೆ ಸಾಧ್ಯವಾಯಿತು ಎಂದುಕೊಂಡು ಆ ರಾತ್ರಿ ನಡೋಮಿಯನ್ನು ಬೇರೆ ಕಡೆ ಮಲಗಲು ಹೇಳಿ ತಾನು ಅವನ ಜಾಗದಲ್ಲಿ ಮಲಗಿದಳು.

ಜೀವನದಲ್ಲಿ ಪ್ರಥಮ ಬಾರಿಗೆ ನಡೋಮಿಗೆ ಭಯವಾಯಿತು. ಇದೊಂದೂ ಗೊತ್ತಿರದ ಜಂಘೊ ಯಥಾಪ್ರಕಾರ ರಾತ್ರಿ ಒಂದು ನಳಿಕೆಯನ್ನು ಮೆಲ್ಲಗೆ ಒಳ ತೂರಿಸಿದ. ತಕ್ಷಣ ಅಜ್ಜಿ ಆ ದ್ರವವನ್ನು ಒಂದು ಬಟ್ಟಲಿನಲ್ಲಿ ಹಿಡಿದಿಟ್ಟು, 'ಓಹೋ ಹೀಗಾ ನೀನು ನಮಗೆ ಮೋಸ ಮಾಡಿದ್ದು, ನಾಳೆ ಮುಖ್ಯಸ್ಥನಿಗೆ ಈ ದ್ರವವನ್ನು ತೋರಿಸಿ ನಿನ್ನ ಮೋಸವನ್ನು ಬಯಲು ಮಾಡಿ ತಕ್ಕ ಶಾಸ್ತಿ ಮಾಡಿಸುವೆ' ಎಂದು ನಡೋಮಿಗೆ ಜೋರು ಮಾಡಿದಳು. ಹೊರಗಿದ್ದ ಜಂಘೊಗೆ ಅಜ್ಜಿಯ ಮಾತುಗಳೂ, ಸ್ನೇಹಿತನ ಅಳುವೂ ಕೇಳಿಸಿದವು. ತಕ್ಷಣ ನಳಿಕೆಯನ್ನು ಎಳೆದುಕೊಂಡು ಜಾಗ ಖಾಲಿ ಮಾಡಿದನು. ಗೆಳೆಯನನ್ನು ಸಂಕಷ್ಟದಿಂದ ಹೇಗೆ ಪಾರು ಮಾಡುವುದು ಎಂದು ಯೋಚಿಸುತ್ತಾ ಕುಳಿತ.

ಆಗ, 'ಯುವಕನೇ, ಯಾಕಿಷ್ಟು ಚಿಂತಾಕ್ರಾಂತನಾಗಿದ್ದಿ? ನನಗೆ ಹೇಳು, ಸಾಧ್ಯವಾದರೆ ನಾನು ನಿನಗೆ ಸಹಾಯ ಮಾಡುತ್ತೇನೆ' ಎಂಬ ಧ್ವನಿ ಕೇಳಿಸಿತು. ಯಾರು ಮಾತನಾಡಿದ್ದು ಎಂದು ಸುತ್ತಲೂ ನೋಡತೊಡಗಿದಾಗ, 'ಕೆಳಗೆ ನೋಡು, ನಾನಿಲ್ಲಿದ್ದೇನೆ' ಎಂದು ಹೇಳಿತು ಮಲಾಮಳ ಪುಟ್ಟ ಇಲಿ. ಆಗ ಜಂಘೊ ಗೆಳೆಯನಿಗೆ ಒದಗಿರುವ ಸಂಕಷ್ಟವನ್ನು ಹೇಳಿದ. ತಕ್ಷಣವೇ ಇಲಿ, 'ನೀನೇನು ಯೋಚಿಸಬೇಡ. ನಾನು ಅವನಿಗೆ ಸಹಾಯ ಮಾಡುತ್ತೇನೆ' ಎಂದು ಹೇಳಿ ಗುಡಿಸಿಲ ಬಳಿಗೆ ಓಡಿತು. ಮಣ್ಣನ್ನು ಕೊರೆದು ಒಳಗೆ ಹೋಗಿ ಅಜ್ಜಿಯ ಬಟ್ಟಲಿನಲ್ಲಿದ್ದ ದ್ರವವನ್ನು ಖಾಲಿ ಮಾಡಿಬಿಟ್ಟಿತು. ಅಜ್ಜಿ ಬೆಳಗ್ಗೆ ಎದ್ದು ಮುಖ್ಯಸ್ಥನಿಗೆ ತೋರಿಸಲೆಂದು ಬಟ್ಟಲನ್ನು ತೆಗೆದುಕೊಂಡರೆ ಅದು ಪೂರಾ ಖಾಲಿಯಾಗಿಬಿಟ್ಟಿತ್ತು. ಈಗ ತಾನೇನೇ ಹೇಳಿದರೂ ಮುಖ್ಯಸ್ಥ ನಂಬದೇ ತನಗೇ ಶಿಕ್ಷೆ ವಿಧಿಸಬಹುದೆಂದು ಹೆದರಿ ಸುಮ್ಮನಾಗಿಬಿಟ್ಟಳು.

ಹೀಗೆ ಆರನೇ ದಿನವೂ ಮುಗಿದಿದ್ದರಿಂದ ಮುಖ್ಯಸ್ಥ ಸಂತೋಷದಿಂದ ನಡೋಮಿಯನ್ನು ಕರೆಸಿ, ತನ್ನ ಮಗಳು ಮಲಾಮಳನ್ನು ಮದುವೆ ಮಾಡಿಕೊಟ್ಟ. ನಡೋಮಿ ತನ್ನ ಗೆಳೆಯ ಜಂಘೊನಿಗೆ ಹಾಗೂ ಪುಟ್ಟ ಇಲಿಗೆ ಕೃತಜ್ಞತೆಗಳನ್ನು ತಿಳಿಸಿದ. ಊರಿಗೆ ವಾಪಸ್ಸಾದ ಮೇಲೆ ಜಂಘೊನಿಗೆ ತನ್ನ ಮನೆಯ ಬಳಿ ಒಂದು ಪುಟ್ಟ ಮನೆಯನ್ನು ಕಟ್ಟಿಸಿಕೊಟ್ಟನು. ಸ್ವಲ್ಪ ಕಾಲದಲ್ಲಿ ಜಂಘೊ ತನ್ನ ಗೆಳತಿ ಕಲೀಮಳನ್ನು ವಿವಾಹವಾಗಿ ಅದೇ ಮನೆಯಲ್ಲಿ ವಾಸವಾದನು. ನಡೋಮಿ, ಜಂಘೊರಂತೆ ಮಲಾಮ ಹಾಗು ಕಲೀಮ ಸಹ ಒಳ್ಳೆಯ ಗೆಳತಿಯರಾದರು.

(ಆಫ್ರಿಕಾದ ಕತೆ)

**–ಉಮಾ ಅಣ್ಣಿಗೇರಿ, ಹುಬ್ಬಳ್ಳಿ**